RNU AIR DHARWAD

<><><>

# DECEMBER 09, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಗಡಿ ನಾಡು, ಬೆಳಗಾವಿಯ ಸುವರ್ಣಸೌಧದಲ್ಲಿ, ಇಂದಿನಿಂದ 10 ದಿನಗಳ ವರೆಗೆ, ವಿಧಾನಮಂಡಲ ಚಳಿಗಾಲದ ಅಧಿವೇಶನ.**
- **ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ವಿಶೇಷ ಚರ್ಚೆಗೆ, ಅಧಿವೇಶನದ ನಾಲ್ಕು ದಿನಗಳ ಕಲಾಪ ಮೀಸಲು – ಸಭಾಪತಿ ಬಸವರಾಜ ಹೊರಟ್ಟಿ.**
- **ಆಧುನಿಕ ತಂತ್ರಜ್ಞಾನ ಬಳಸಿ, ಕೃಷಿ ಉತ್ಪಾದನೆ ದ್ವಿಗುಣಗೊಳಿಸುವುದು, ರಾಜ್ಯ ಸರ್ಕಾರದ ಗುರಿ.**
- **ಇಂದು, ಅಂತಾರಾಷ್ಟ್ರೀಯ, ಭ್ರಷ್ಟಾಚಾರ ವಿರೋಧ ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಗಡಿ ನಾಡು, ಕುಂದಾನಗರಿ, ಬೆಳಗಾವಿಯ ಸುವರ್ಣಸೌಧದಲ್ಲಿ, ಇಂದಿನಿಂದ 10 ದಿನಗಳ ವರೆಗೆ, ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಯಲಿದೆ.**

<><><>

**ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿ, ಈ ವರೆಗೆ, ಸದಸ್ಯರಿಂದ 3 ಸಾವಿರದ 4 ಪ್ರಶ್ನೆಗಳು, 205 ಗಮನ ಸೆಳೆಯುವ ಸೂಚನೆಗಳು, ನಿಯಮ 351ರ 96 ಸೂಚನೆಗಳನ್ನು ಚರ್ಚೆಗೆ ಸ್ವೀಕರಿಸಲಾಗಿದೆ. ಜತೆಗೆ 3 ಖಾಸಗಿ ವಿಧೇಯಕಗಳನ್ನು ಸಹ ಚರ್ಚೆಯ ಪಟ್ಟಿಗೆ ಸೇರಿಸಲಾಗಿದೆ ಎಂದರು.**

<><><>

**ಸಭಾಧ್ಯಕ್ಷ ಯು.ಟಿ.ಖಾದರ್ ಧ್ವನಿ 35 ಸೆಕೆಂದುಗಳು**

<><><>

ಕಿತ್ತೂರು ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕವನ್ನು ಒಳಗೊಂಡ, ಉತ್ತರ ಕರ್ನಾಟಕದ ಸಮಸ್ಯೆಗಳನ್ನು, ವಿಶೇಷವಾಗಿ ಚರ್ಚಿಸಿ, ಪರಿಹಾರ ಕಂಡುಕೊಳ್ಳಲು, ನಾಲ್ಕು ದಿನಗಳ ಕಲಾಪವನ್ನು ಮೀಸಲಿಡಲಾಗಿದೆ ಎಂದು, ವಿಧಾನ ಪರಿ ‘ತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಳೆ ಮಂಗಳವಾರ ಮತ್ತು ನಾಡಿದ್ದು ಬುಧವಾರ, ಉತ್ತರ ಕರ್ನಾಟಕದ ಸಮಸ್ಯೆಗಳ ಸುದೀರ್ಘ ಚರ್ಚೆಗೆ ಅವಕಾಶ ನೀಡಲಾಗಿದೆ ಎಂದರು.

<><><>

ಸಭಾಪತಿ ಬಸವರಾಜ ಹೊರಟ್ಟಿ ಧ್ವನಿ 50 ಸೆಕೆಂದುಗಳು

<><><>

ಬೆಳಗಾವಿಯ ಸುವರ್ಣಸೌಧದ ನೆಲಮಹಡಿಯಲ್ಲಿ, ‘ಬಾಲಕ ಮೋಹನದಾಸನಿಂದ ಮಹಾತ್ಮನಾಗುವ ವರೆಗೆ’ ಧ್ಯೇಯದೊಂದಿಗೆ, ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ, ಮಹಾತ್ಮ ಗಾಂಧೀಜಿ ಅವರ ಜೀವನಗಾಥೆ ಬಿಂಬಿಸುವ, ನೂರು ವಿಶೇ ’ ಛಾಯಾಚಿತ್ರಗಳ, ಅಪರೂಪದ ಪ್ರದರ್ಶಿನಿ ಸಿದ್ಧಪಡಿಸಿದೆ. 1924ರಲ್ಲಿ ಮಹಾತ್ಮ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ, ಬೆಳಗಾವಿಯಲ್ಲಿ ಜರುಗಿದ, ಕಾಂಗ್ರೆಸ್ ಮಹಾಧಿವೇಶನದ, ಶತಮಾನೋತ್ಸವ ನೆನಪಿನ, ಈ ವಿಶೇ ’ ಛಾಯಾಚಿತ್ರಗಳ ಪ್ರದರ್ಶನಿ, ಗಮನ ಸೆಳೆಯುವಂತಿದೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಸಚಿವಾಲಯದ ಹಿರಿಯ ಅಧಿಕಾರಿಗಳೊಂದಿಗೆ, ಪ್ರದರ್ಶಿನಿ ವೀಕ್ಷಿಸಿ, ಮೆಚ್ಚುಗೆ ವ್ಯಕ್ತ ಪಡಿಸಿದರು.

<><><>

ವಿಶ್ವ ಗುರು ಶ್ರೀ ಬಸವಣ್ಣನವರು ಸ್ಥಾಪಿಸಿದ, ವಿಶ್ವದ ಮೊದಲ ಸಂಸತ್ತು ಎಂಬ ಖ್ಯಾತಿಯ ಅನುಭವ ಮಂಟಪದ, ಬೃಹತ್ ತೈಲವರ್ಣಚಿತ್ರವನ್ನು, ವಿಧಾನಸಭಾಧ್ಯಕ್ಷ ಯು.ಟಿ ಖಾದರ್ ಅವರ ಅಧ್ಯಕ್ಷತೆಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇಂದು ಬೆಳಗ್ಗೆ 10.30ಕ್ಕೆ, ಅನಾವರಣಗೊಳಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವ ಸಂಪುಟದ ಸಹೋದ್ಯೋಗಿಗಳು, ಸಚಿವಾಲಯದ ಹಿರಿಯ ಅಧಿಕಾರಿಗಳು, ಈ ಕಾರ್ಯಕ್ರಮದಲ್ಲಿ, ಪಾಲ್ಗೊಳ್ಳುವರು. 20 ಅಡಿ ಉದ್ದ ಹಾಗೂ 10 ಅಡಿ ಅಗಲದ ಬೃಹತ್ ಕ್ಯಾನ್ವಾಸ್ ನಲ್ಲಿ ತೈಲ ವರ್ಣದ ಮೂಲಕ ಮೂಡಿರುವ ವಿಶೇಷ ಚಿತ್ರ, ಪ್ರಜಾಪ್ರಭುತ್ವದ ಮೂಲ ಆಶಯಗಳು, ಸಮಾನತೆ, ಮಾನವೀಯ ಸಂದೇಶಗಳನ್ನು ಜಗತ್ತಿಗೆ ಪರಿಚಯಿಸಲಿವೆ. ಬೆಂಗಳೂರು ಚಿತ್ರಕಲಾ ಪರಿಷತ್ತಿನ ಖ್ಯಾತ ಕಲಾವಿದರಾದ ಸತೀಶ್ ರಾವ್ ಶಿವಮೊಗ್ಗ, ಶ್ರೀಕಾಂತ್ ಹೆಗಡೆ ಸಿದ್ದಾಪುರ, ಶೇಷಾದ್ರಿಪುರಂ ಕೆನ್ ಸ್ಕೂಲ್ ಕಲಾ ಶಾಲೆಯ ಅಶೋಕ್ ಯು, ಜಗಳೂರು ರಾಜಾ ರವಿವರ್ಮ ಕಲಾ ಶಾಲೆಯ ರೂಪಾ ಎಂ.ಆರ್, ವೀರಣ್ಣ ಮಡಿವಾಳಪ್ಪ ಬಬ್ಲಿ ಹಾಗೂ ಜಮಖಂಡಿ ದಫಲಾಪುರದ ಮಹೇಶ ನಿಂಗಪ್ಪ, ತೈಲ ವರ್ಣ ಚಿತ್ರ ರಚನೆ ಮಾಡಿದ್ದಾರೆ.

<><><>

ವಿಧಾನಮಂಡಲದ 10 ದಿನಗಳ ಚಳಿಗಾಲದ ಅಧಿವೇಶನಕ್ಕೆ, ವ್ಯಾಪಕ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಎರಡೂವರೆ ಸಾವಿರ ಅಧಿಕಾರಿಗಳು, ಸಿಬ್ಬಂದಿ ಮತ್ತು ಭದ್ರತೆಗಾಗಿ 6 ಸಾವಿರ ಪೊಲೀಸ್ ಅಧಿಕಾರಿಗಳು ಸೇರಿದಂತೆ, ಒಟ್ಟಾರೆ ಎಂಟೂವರೆ ಸಾವಿರ ಸಿಬ್ಬಂದಿ ನಿಯೋಜನೆಗೊಂಡಿದ್ದಾರೆ. ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ನೇತೃತ್ವದಲ್ಲಿ, 10 ಸಮಿತಿ ರಚಿಸಲಾಗಿದೆ. ಅಧಿವೇಶನವನ್ನು ಯಶಸ್ವಿಯಾಗಿ ನಡೆಸಲು ಸರ್ಕಾರ, ಸಕಲ ಸಿದ್ಧತೆ ಕೈಗೊಂಡಿದೆ.

<><><>

ಈ ಮಧ್ಯೆ, 64 ವಿವಿಧ ಸಂಘಟನೆ, ಸಂಸ್ಥೆಗಳು ಸುವರ್ಣಸೌಧದ ಮುಂದೆ ಪ್ರತಿಭಟಿಸಲು, ಪರವಾನಗಿ ಕೋರಿ, ಬೆಳಗಾವಿ ಪೊಲೀಸ್ ಆಯುಕ್ತರಿಗೆ, ಅರ್ಜಿಗಳನ್ನು ಸಲ್ಲಿಸಿವೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಧುನಿಕ ತಂತ್ರಜ್ಞಾನ ಬಳಸಿ, ಕೃಷಿ ಉತ್ಪಾದನೆ ದ್ವಿಗುಣಗೊಳಿಸುವ ಬಗ್ಗೆ, ಕೃಷಿ ಮೇಳದಲ್ಲಿ ರೈತರಿಗೆ ಮಾಹಿತಿ ನೀಡಲು, ಆದ್ಯತೆ ನೀಡಲಾಗಿದೆ. ಸರ್ಕಾರದ ಅನುದಾನ ಪಡೆದು, ರೈತರು ಆಧುನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು, ಮನಸ್ಸು ಮಾಡಬೇಕು ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ, ಕೋರಿದ್ದಾರೆ. ರಾಯಚೂರು ಕೃಷಿ ವಿಶ್ವವಿದ್ಯಾಲಯ ಆಯೋಜಿಸಿರುವ, ಕೃಷಿ ಮೇಳದ ಎರಡನೇ ದಿನದ ಕಾರ್ಯಾಗಾರಕ್ಕೆ, ಚಾಲನೆ ನೀಡಿ, ಮಾತನಾಡಿದರು. ಜಿಲ್ಲಾ ಉಸ್ತುವಾರಿ ಸಚಿವ ಶರಣಪ್ರಕಾಶ್ ಪಾಟೀಲ, ಮಾತನಾಡಿ, ಕೃಷಿ ಮೇಳಕ್ಕೆ 2 ಲಕ್ಷದ 20 ಸಾವಿರ ರೈತರು ಕಳೆದ ಎರಡು ದಿನಗಳಲ್ಲಿ ಭೇಟಿ ನೀಡಿದ್ದಾರೆ ಎಂದರು. 'ಹವಾಮಾನ ವೈಪರೀತ್ಯಕ್ಕೆ, ಸುಸ್ಥಿರ ಕೃಷಿ', ಘೋ 'ವಾಕ್ಯದಡಿ ಆಯೋಜಿತ ಮೂರು ದಿನಗಳ ಕೃಷಿ ಮೇಳಕ್ಕೆ, ಇಂದು ಸಾಧಕ ಕೃಷಿಕರ ಸನ್ಮಾನದೊಂದಿಗೆ, ತೆರೆ ಬೀಳಲಿದೆ.

<><><>

ಬಳ್ಳಾರಿಯ ಬಿಮ್ಸ್ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಐವರು ಬಾಣಂತಿಯರ ಸಾವಿಗೆ, ಕಳಪೆ ಗುಣಮಟ್ಟದ ಔಷಧಿ ಕಾರಣ ಎನ್ನುವುದು, ಮೇಲ್ನೋಟಕ್ಕೆ ಸಾಬೀತಾಗಿದೆ. ಪ್ರಕರಣವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಮೃತಪಟ್ಟ ಐವರು ಬಾಣಂತಿಯರ ವಾರಸುದಾರರಿಗೆ, 5 ಲಕ್ಷ ರೂಪಾಯಿ ಪರಿಹಾರ ನೀಡಲು, ಸರ್ಕಾರ ತೀರ್ಮಾನಿಸಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬಳ್ಳಾರಿ ಜಿಲ್ಲೆ, ಸಂಡೂರು ಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ, ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಅಭಿವೃದ್ಧಿ ಆಯುಕ್ತರ ಸಮಗ್ರ ವರದಿ ಆಧರಿಸಿ, ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಮಾತನಾಡಿ, ಸಂಡೂರು ಪಟ್ಟಣಕ್ಕೆ ಒಂದು ಸಾವಿರ ಆಶ್ರಯ ಮನೆಗಳನ್ನು ಮಂಜೂರು ಮಾಡುವುದಾಗಿ ತಿಳಿಸಿದರು.

<><><>

ವಿಜ್ಞಾನ ಮತ್ತು ತಂತ್ರಜ್ಞಾನ, ಸಾಕಷ್ಟು ಮುಂದುವರೆದಿರುವ ಈ ಕಾಲದಲ್ಲೂ, ಬಳ್ಳಾರಿಯಲ್ಲಿ ಐವರು ಬಾಣಂತಿಯರ ಸಾವು ಸಂಭವಿಸಿದ್ದು, ಗಂಭೀರ ಪ್ರಮಾದ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಬಾಣಂತಿಯರ ಸಾವನ್ನು ಗಂಭೀರವಾಗಿ ಪರಿಗಣಿಸದಿರುವುದು, ಕಳವಳದ ಸಂಗತಿ ಎಂದು, ಆರೋಪಿಸಿದರು.

<><><>

ಇಂದು, ಅಂತಾರಾಷ್ಟ್ರೀಯ ಭ್ರಷ್ಟಾಚಾರ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆ. ವಿಶ್ವ ಸಂಸ್ಥೆ, ಸಮುದಾಯದ ಸಹಭಾಗಿತ್ವದಲ್ಲಿ, ಭ್ರಷ್ಟಾಚಾರವನ್ನು ತೊಡೆದು ಹಾಕಿ, ಸಾಮಾಜಿಕರಲ್ಲಿ ಸಮಗ್ರತೆಯ ಭಾವವನ್ನು ಉದ್ದೀಪಿಸಲು ಈ ದಿನವನ್ನು ಮೀಸಲಿರಿಸಿದೆ. "ಭ್ರಷ್ಟಾಚಾರ ವಿರುದ್ಧದ ಹೋರಾಟದಲ್ಲಿ, ಯುವ ಜನತೆ ಒಂದಾಗಿ, ನಾಳೆಗಾಗಿ ಸಮಗ್ರತೆಯನ್ನು ರೂಪಿಸಬೇಕು" ಎಂಬ ಧ್ಯೇಯದೊಂದಿಗೆ, ಭ್ರಷ್ಟಾಚಾರ ವಿರೋಧಿ ದಿನವನ್ನು, ಆಚರಿಸಲಾಗುತ್ತಿದೆ. #UnitedAgainstCorruption; #ಭ್ರಷ್ಟಾಚಾರದ ವಿರುದ್ಧ ಸಂಘಟಿತರಾಗಿದ್ದೇವೆ ಎಂಬ, ಧ್ಯೇಯವನ್ನು ಸಾಮಾಜಿಕ ಮಾಧ್ಯಮಗಳಲ್ಲಿ, ವರ್ಷವಿಡೀ ಪ್ರಚುರ ಪಡಿಸುವಂತೆ, ವಿಶ್ವ ಸಂಸ್ಥೆ ಕೋರಿದೆ.

<><><>

ಕರ್ನಾಟಕ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ, ನಾ.ಮೊಗಸಾಲೆ ಅವರ, ಚೈತನ್ಯ ಮಹಾಪ್ರಭುಗಳ ಜೀವಾನಾಧರಿತ 'ವಿಶ್ವಂಭರ' ಕಾದಂಬರಿಯನ್ನು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ರಾಜ್ಯಪಾಲರು, ಶ್ರೀ ಚೈತನ್ಯ ಮಹಾಪ್ರಭುಗಳ ಬೋಧನೆಗಳು ಸಮಾನತೆ, ಸಹೋದರತ್ವ ಮತ್ತು ಸ್ವಾತಂತ್ರ್ಯದ ತತ್ವಗಳನ್ನು ಆಧರಿಸಿವೆ ಎಂದು ಹೇಳಿದರು. ಚೈತನ್ಯ ಪ್ರಭುಗಳ ಜೀವನ ಚರಿತ್ರೆಯನ್ನು ಕನ್ನಡದಲ್ಲಿ ಬರೆದಿದ್ದಕ್ಕಾಗಿ, ಮೊಗಸಾಲೆ ಅವರನ್ನು ರಾಜ್ಯಪಾಲರು, ಅಭಿನಂದಿಸಿದರು.

<><><>

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ, ಶ್ರೀ ರಾ.ಹ. ದೇಶಪಾಂಡೆ ಸಭಾ ಭವನದಲ್ಲಿ, 'ಕರ್ನಾಟಕದ ದಾರ್ಶನಿಕ ಪಂಥಗಳು' ವಿಶೇಷ ಉಪನ್ಯಾಸ ಮಾಲಿಕೆ, 6 ದಿನಗಳ ಕಾಲ, ಸಂಜೆ 6 ಗಂಟೆಗೆ ಆಯೋಜಿತವಾಗಿದೆ. ಸೂಫಿ, ನಾಥ, ಶಾಕ್ತ, ಆರೂಢ, ಶರಣ ಹಾಗೂ ಧಮ್ಮ ಪಂಥಗಳ ಕುರಿತು ಚಿಂತನ–ಮಂಥನ ನಡೆಯಲಿದೆ. ನಾಥ ಪಂಥದ ಕುರಿತು, ವಿಜಯನಗರ ಜಿಲ್ಲೆ, ಹೊಸಪೇಟೆಯ ಪ್ರೊಫೆಸರ್ ರಹಮತ್ ತರಿಕೆರೆ ಅವರು, ನಿನ್ನೆ ವಿಶೇಷ ಉಪನ್ಯಾಸ ನೀಡಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿ, ಪರಿಸರ ಅಧಿಕಾರಿಗಳು, 250 ಕಿಲೋ ನಿಷೇಧಿತ ಪ್ಲಾಸ್ಟಿಕ್ ಚೀಲಗಳನ್ನು ವಶ ಪಡಿಸಿಕೊಂಡು, 30 ಸಾವಿರ ರೂಪಾಯಿ, ದಂಡ ವಿಧಿಸಿದ್ದಾರೆ.

<><><>

ದಾವಣಗೆರೆ ಜಿಲ್ಲೆಯ, ಬೀದಿ ಬದಿ ವ್ಯಾಪಾರಸ್ಥರ ಅಭ್ಯುದಯಕ್ಕಾಗಿ, ಕೇಂದ್ರ ಪುರಸ್ಕೃತ, ಪ್ರಧಾನಮಂತ್ರಿ ಸ್ವ–ನಿಧಿ ಯೋಜನೆ ಅನುಷ್ಠಾನದ ವೇಗವರ್ಧಿಸಲು, ಪಾಕ್ಷಿಕ ಶಿಬಿರಗಳನ್ನು ಜಿಲ್ಲಾಡಳಿತ ಆಯೋಜಿಸಿದೆ.

<><><>

ಕ್ಷಯ ರೋಗ ಪತ್ತೆ ಮತ್ತು ಸೂಕ್ತ ಚಿಕಿತ್ಸೆ ನೀಡುವ, ನೂರು ದಿನಗಳ ನಿರಂತರ ಅಭಿಯಾನದ, ನಿಕ್ಷಯ್ ಪೋಷಣ್ ವಾಹನಕ್ಕೆ, ದಾವಣಗೆರೆ ಸಂಸದರಾದ ಪ್ರಭಾ ಮಲ್ಲಿಕಾರ್ಜುನ ಚಾಲನೆ ನೀಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಗಡಿ ನಾಡು, ಬೆಳಗಾವಿಯ ಸುವರ್ಣಸೌಧದಲ್ಲಿ, ಇಂದಿನಿಂದ 10 ದಿನಗಳ ವರೆಗೆ, ವಿಧಾನಮಂಡಲ ಚಳಿಗಾಲದ ಅಧಿವೇಶನ.
- ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ವಿಶೇಷ ಚರ್ಚೆಗೆ, ಅಧಿವೇಶನದ ನಾಲ್ಕು ದಿನಗಳ ಕಲಾಪ ಮೀಸಲು – ಸಭಾಪತಿ ಬಸವರಾಜ ಹೊರಟ್ಟಿ.
- ಆಧುನಿಕ ತಂತ್ರಜ್ಞಾನ ಬಳಸಿ, ಕೃಷಿ ಉತ್ಪಾದನೆ ದ್ವಿಗುಣಗೊಳಿಸುವುದು, ರಾಜ್ಯ ಸರ್ಕಾರದ ಗುರಿ.
- ಇಂದು, ಅಂತಾರಾಷ್ಟ್ರೀಯ, ಭ್ರಷ್ಟಾಚಾರ ವಿರೋಧ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ